Doc-SW
T-P-2

Reg no KRNN 12 ಶ್ರೀ - For Influential Publicity - 29-10-76

ಶ್ರೀ ಮಹೋತ್ಸವ ನೆರವೇರಿ ವಜ್ರಮಹೋತ್ಸವ ನೇರವೇರುತಲಿರುವ ಈ ಕ್ಷಣ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily. Mysore 4 ★

ಸ್ಥಾಪಕರು : ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್

ಶ್ರೀ ಶೃಂಗೇರಿ ಜಗದ್ಗುರುಗಳವರ ವರ್ಧಂತ್ಯುತ್ಸವ

ಶೃಂಗೇರಿ — ಶ್ರೀ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಎರಡನೆತ್ತನೇ ವರ್ಧಂತ್ಯುತ್ಸವವು ತಾ. 22 ರಂದು ವೈಭವವಾಗಿ ಆಚರಿಸಲ್ಪಟ್ಟಿತು

ಕೇಂದ್ರ ಮಂತ್ರಿ ಶ್ರೀ ಹುಚ್ಚಮಾಸ್ತಿಗೌಡರು ಸಮಾರಂಭವನ್ನು ಉದ್ಘಾಟನೆ ಮಾಡುತ್ತಾ, ಅರ್ಥಕಾಮಗಳು ಧರ್ಮದ ತಳಹದಿಯಲ್ಲಿರುವ ಬದಲಾಗಿ ಈಗ ಧರ್ಮವೇ ಅರ್ಥಕಾಮಗಳ ತಳಹದಿಯಲ್ಲಿದೆ ಎಂದು ಹೇಳಿ, ಜೀವನದ ಗುರಿ ಮೋಕ್ಷ ಅಥವಾ ಆತ್ಮ ಸಾಕ್ಷಾತ್ಕಾರ ಆಗಬೇಕು ಎಂದು ಹೇಳಿದರು ಶ್ರೀಶ್ರೀಯವರ ಶ್ರೇಯಸ್ಸೇ ನಮ್ಮ ಶ್ರೇಯಸ್ಸು ಎಂದರು.

ಮಹಾಸ್ವಾಮಿಗಳವರು ತಮ್ಮ ಅನುಗ್ರಹ ಭಾಷಣದಲ್ಲಿ, ನಾವು ಕಾಲವನ್ನು ಒಪ್ಪುವುದಾಪಿ, ಪರಮಾತ್ಮನು ಸರ್ವಕಾಲ ವ್ಯಾಪಿಯಾಗಿದ್ದಾನೆ ಎಂಬುದನ್ನು ಅರಿತು, ಪ್ರಮಾಣ ಶಾಸ್ತ್ರಗಳನ್ನು ಓದಿ, ದೇಶ ಉಕ್ತಿಗಳನ್ನು ಕೇಳಿ, ನಡೆದರೆ ಅನುಭವ ಬರುತ್ತದೆಂದು ತಿಳಿಸಿ ಸ್ವಾರ್ಥ ಮನೋಭಾವ ಹೋಗಬೇಕೆಂದು ಆಶೀರ್ವಚನ ಕೊಡಿಸಿದರು.

○

ಕೇಂದ್ರ ಆಹಾರ ಸಂಶೋಧನಾಲಯದ ಆಯ್ಕೆ

ಮೈಸೂರು — ಇಲ್ಲಿಯ ಕೇಂದ್ರ ಆಹಾರ ಸಂಶೋಧನಾಲಯವು ವಿಶ್ವಸಂಸ್ಥೆ ವಿಶ್ವವಿದ್ಯಾನಿಲಯದಿಂದ ವಿಶ್ವದ ಹಸಿವಿನ ಸಮಸ್ಯೆ ಜಯಿಸಲು, ಪ್ರಾಯೋಗಿಕ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿಗೆ, ವಿಶ್ವದಲ್ಲಿನ 3 ಸಂಸ್ಥೆಗಳಲ್ಲಿ ಒಂದಾಗಿ ಆರಿಸಲ್ಪಟ್ಟಿದೆ.

★

ಮೈಸೂರು ಜಿಲ್ಲಾ ರೈತರ ಸಮ್ಮೇಳನ

ಮೈಸೂರು ಜಿಲ್ಲಾ ರೈತರ ಸಮ್ಮೇಳನವು ಈ ತಿಂಗಳು 31 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ ಮೈಸೂರು ನಗರದ ಸಹಕಾರ ಭವನದಲ್ಲಿ ನಡೆಯಲಿದೆ ಎಂದು ಕಾರ್ಯಕ್ರಮದ ವ್ಯವಸ್ಥಾಯ ಮಂತ್ರಿ ಶ್ರೀ ಎಸ್. ಚಿಕ್ಕೇಗೌಡ ಅವರು ಸಮ್ಮೇಳನವನ್ನು ಉದ್ಘಾಟಿಸುವರು. ಅಖಿಲ ಭಾರತ ಕೃಷಿ ಸಮಾಜದ ಅಧ್ಯಕ್ಷ ಶ್ರೀ ಟಿ. ಶ್ರೀನಿವಾಸನ್ ಮತ್ತಿತರ ಗಣ್ಯ ವ್ಯಕ್ತಿಗಳು ಸಮಾರಂಭದಲ್ಲಿ ಭಾಗವಹಿಸುವರು.

○

ವಿಶ್ವಸಂಸ್ಥೆಯ ದಿನಾಚರಣೆ

ಮೈಸೂರು — ವಿಶ್ವಸಂಸ್ಥೆಯು ಸ್ಥಿರವಾಗಿ ನೆಲೆಸಲೂ ಮತ್ತು ಸೇವೆ ಸಲ್ಲಿಸಲೂ ಇರುವುದಾಗಿದೆ ಎಂದು ಈ ತಿಂಗಳು 26 ನೇ ತಾರೀಖು ಮಹಾರಾಣಿ ಕಾಲೇಜಿನಲ್ಲಿ ನಡೆದ ವಿಶ್ವಸಂಸ್ಥೆ ದಿನದ ಸಮಾರಂಭದಲ್ಲಿ, ವಿಶ್ವವಿದ್ಯಾನಿಲಯದ ಕರೆಸ್ಪಾಂಡೆನ್ಸ್ ಇನ್‌ಸ್ಟಿಟ್ಯೂಟಿನ ಶ್ರೀ ಜೆಂಬಿ ಪುರಾಣೀಕರು ತಿಳಿಸಿದರು.

★

ಒಬ್ಬ ವ್ಯಕ್ತಿಯನ್ನಾಗಲೀ, ಸಮಾಜವನ್ನಾಗಲೀ ಬಲಾತ್ಕಾರವಾಗಿ ಅಹಿಂಸಾತ್ಮಕವಾಗಿ ಮಾಡಲು ಸಾಧ್ಯವಿಲ್ಲ. — ಮಹಾತ್ಮಾ ಗಾಂಧಿ

ರಾಷ್ಟ್ರಗಳಿಗೆ ಸೂಚನೆ

ನವ ದೆಹಲಿ — ವಿದ್ಯುತ್ ಮತ್ತು ನೀರಾವರಿ ದರಗಳನ್ನು ಅಭಿವೃದ್ಧಿ ಪಡಿಸಲು ಮುಂದಿನ ವರ್ಷದ ವಾರ್ಷಿಕ ಯೋಜನೆಗೆ ಹೆಚ್ಚು ಹಣ ಒದಗಿಸಿಕೊಳ್ಳಲು ಯೋಜನಾ ಆಯೋಗ ರಾಜ್ಯಗಳಿಗೆ ಸೂಚಿಸಿದೆ.

★

ಗೋಖಲೆಯವರ ಪ್ರಶ್ನೆ

ನವ ದೆಹಲಿ — 44 ನೇ ರಾಜ್ಯಾಂಗ ತಿದ್ದುಪಡಿಯನ್ನು ಕುರಿತು, ನ್ಯಾಯಾಂಗ ಮಂತ್ರಿ ಶ್ರೀ ಗೋಖಲೆಯವರು ಲೋಕಸಭೆಯಲ್ಲಿ ಮಾತನಾಡುತ್ತಾ, ಖಾಸಿಂ ಕೋರ್ಟು ರಾಜ್ಯಾಂಗ ಬದಲಾವಣೆಯ ನ್ಯಾಯ ಸಮರ್ಥತೆ ಬಗ್ಗೆ ಯಾವ ಪ್ರಶ್ನೆಯನ್ನು ಸ್ವೀಕರಿಸುವ, ತೀರ್ಮಾನಿಸುವ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಪ್ರಶ್ನೆ ಪಡಿಸಿದರು

○

ಗುಂಡೇಟಿನಿಂದ ಕೊಲೆ

ರೀವಾ — ಇಲ್ಲಿಯ ಧಾನ್ಯ ವ್ಯಾಪಾರಿ ಶ್ರೀ ರಾಮು ಅವತಾರನನ್ನು ಅವನ ಅಂಗಡಿಯಿಂದ ಇಬ್ಬರು ಹೊರಗೆ ಕರೆದು ಗುಂಡನ್ನು ಹೊಡೆದು ಕೊಂದರು

○

ಅಧಿಕಾರಿಗಳ ಆಶ್ವಾಸನೆ

ಗುಜರಾತಿನಲ್ಲಿ ಕಡಲೇಕಾಯಿ ಎಣ್ಣೆಯನ್ನು ಮುಕ್ತ ವರ್ತಕರುಕಟ್ಟೆಯಲ್ಲಿ ಮಾರುವುದರ ಮೇಲಿರುವ ಪ್ರತಿಬಂಧವು ಬರುವ ವಾರದೊಳಗೆ ವಾಪಸು ತೆಗೆದುಕೊಳ್ಳಲಾಗುವುದೆಂದು ನಾಗರೀಕ ಸರಬರಾಜು ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿರುವರು.

★

ನಾಲ್ವರ ಮರಣ ಚಂಗಲ್‌ಪೇಟೆಲಿ

ಒಂದು ಸಾರಿಗೆ ಸಂಸ್ಥೆ ಬಸ್‌ಗೆ ಕಾರ್ ಡಿಕ್ಕಿ ಹೊಡೆದು 5 ಮಂದಿ ಸತ್ತು 9 ಜನ ಗಾಯಗೊಂಡರು

ಬೆಂಗಳೂರು ಕುದುರೆ ಪಂದ್ಯಗಳು

ಬೆಂಗಳೂರು — ಶನಿವಾರ ಪ್ರಾರಂಭವಾಗುವ ಕುದುರೆ ಪಂದ್ಯಗಳಲ್ಲಿ ಸ್ಟೇಕ್ ಹಣ ರೂ. 4404900 ಇದ್ದು ಕಳೆದ ವರ್ಷಕ್ಕಿಂತ ರೂ. 20000 ಹೆಚ್ಚಾಗಿದೆ. ವಿಜಯ ಹೊಂದಿದವನಿಗೆ ರೂ. 1 ಲಕ್ಷದ 48 ವರೆ ಸಾವಿರ ಬೆಲೆ ಬಾಳುವ ಟ್ರೋಫಿಗಳನ್ನು ಒಪ್ಪುವಾನಿಸಲಾಗುವುದು 600 ಕುದುರೆಗಳು ಹಲವು ವಿದೇಶೀ ಜಾಕಿಗಳು ಭಾಗವಹಿಸುವ ನಿರೀಕ್ಷೆ ಇದೆ

●

ಬಾಂಡ್ ಮೇಲೆ ಬಿಡುಗಡೆ

ಕಲ್ಕತ್ತಾ — ಚಿತ್ರ ನಟ ವಿಶ್ವಜಿತ್ ಚಟರ್ಜಿಯವರು 65–66 ರ ತನ್ನ ಆದಾಯ ತೆರಿಗೆ ಪಟ್ಟಿಯಲ್ಲಿ ತನ್ನ ವೃತ್ತಿ ಆದಾಯ ರೂ 53596 ಸೇರಿಸದಿದ್ದಕ್ಕಾಗಿ ಅವನಿಗೆ ಮ್ಯಾಜಿಸ್ಟ್ರೇಟ್‌ರು ವಿಧಿಸಿದ್ದ 2 ತಿಂಗಳ ಕಠಿಣ ಸಜೆಯನ್ನು ಪೆಷನ್ಸ್ ನ್ಯಾಯಾಧೀಶರು ಬದಲಿಸಿ ರೂ. 2 ಸಾವಿರ ಪೊ ಬೇಷನ್ ಬಾಂಡ್ ಮೇಲೆ ಬಿಡುಗಡೆ ಮಾಡಿದರು

●

ಮೈಸೂರು ದಸರಾ ವಸ್ತು ಪ್ರದರ್ಶನ

30 ರ ಸಂಜೆ 6 ಗಂಟೆಗೆ ಮೈಸೂರು ತಾಲ್ಲೂ ಅಜ್ಜಂಪುರ ತಂಡದವರಿಂದ ವೀರಗಾಸೆ ನೃತ್ಯ.

7 ಗಂಟೆಗೆ ಶ್ರೀ ಬಿ ಎನ್. ಚಿನ್ನಪ್ಪ ಮತ್ತು ಶ್ರೀ ಅರುಣ ಕುಮಾರ್ ವೃಂದದವರಿಂದ ಸದಾರಮೆ ನಾಟಕ

31 ರ ಸಂಜೆ 7 ಗಂಟೆಗೆ ಶ್ರೀ ಸೀತಾರಾಮಿ ಗೋವಿಂದರಾಜನ್ ನೈಟ್

○

ಬೆಲೆ ಏರಿಕೆ

ನವ ದೆಹಲಿ — ಸಹಕಾರಿ ಸಕ್ಕರೆ ಕಾರ್ಖಾನೆಗಳು ಮುಕ್ತ ಮಾರಾಟ ಸಕ್ಕರೆ ಬೆಲೆಯನ್ನು ಕ್ವಿಂಟಾಲಿಗೆ ರೂ. 5 ಹೆಚ್ಚಿಸಲು ನಿರ್ಧರಿಸಿದೆ

ಇಸ್ಲಾಂವಿರೋಧಿಯಲ್ಲ

ಕುಟುಂಬ ಯೋಜನೆಗೆ ಇಸ್ಲಾಂ ವಿರೋಧಿಯಲ್ಲವೆಂದು ನ್ಯಾಯಾಂಗ ರಾಜ್ಯ ಮಂತ್ರಿ ಶ್ರೀ ಸಯದ್ ಮಹಮ್ಮದ್‌ರವರು ಹೇಳಿರುವರು.

○

ಸಾಹಿತಿಗಳ ನಡವಣ ಬಾಂಧವ್ಯ

ಬೆಂಗಳೂರು—ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿರುವ ಉದಯೋನ್ಮುಖ ಲೇಖಕಿಯರ ಶಿಬಿರವನ್ನು ಉದ್ಘಾಟಿಸುತ್ತಾ, ಪರಿಷತ್ ಅಧ್ಯಕ್ಷ ಶ್ರೀ ಜಿ ನಾರಾಯಣರು, ಪ್ರಸಕ್ತ ಹಿರಿಯ ಮತ್ತು ಕಿರಿಯ ಸಾಹಿತಿಗಳ ನಡವಣ ಬಾಂಧವ್ಯವು ಅಷ್ಟು ನಿಕಟವಾಗಿಲ್ಲವೆಂದು ಹೇಳಿದರು.

ಮೈಸೂರು ದಸರಾ ವಸ್ತು ಪ್ರದರ್ಶನ,
ದೊಡ್ಡಕೆರೆ ಮೈದಾನ, ಮೈಸೂರು

ನೂತನ ಸುಸಜ್ಜಿತ ರಂಗಮಂಟಪದಲ್ಲಿ

30-10-76 ನೇ ಶನಿವಾರ ಸಂಜೆ 7 ಘಂಟೆಗೆ

ಖ್ಯಾತ ಕಲಾವಿದರುಗಳಾದ ಶ್ರೀ ಚಿನ್ನಪ್ಪ ಮತ್ತು ಶ್ರೀಮತಿ ಚಲನಚಿತ್ರ ಕಲಾವಿದರಾದ ಶ್ರೀ ಅರುಣ್ ಕುಮಾರ್ ಮತ್ತು ವೃಂದದವರಿಂದ

ಸದಾರಮೆ ಎಂಬ ನಾಟಕ

ಪ್ರವೇಶ ದರ 1 ರೂ.

ಡಿ ಜಯದೇವರಾಜ ಅರಸ್, ಬಿ. ಪಿ ಲಿಂಗಯ್ಯ
ಪ್ರಧಾನ ಕಾರ್ಯದರ್ಶಿಗಳು

ವುಡ್‌ಲಾಂಡ್ಸ್ 29 10 76 ರಿಂದ

ಅಮೋಘ 3ನೇ ವಾರ

ಮಾ

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ಹಿಂದಿ

ಕಲರ್

ದಿನ 3 ಪ್ರದರ್ಶನಗಳು

ಅಪೂರ್ವ 29 10 76ರಿಂದ

ರಾಣಿ ಹೊನ್ನಮ್ಮ ಹೊಸ ಕಾಪಿ

ಡಾ. ರಾಜಕುಮಾರ್ ನರಸಿಂಹರಾಜು ಲೀಲಾವತಿ ಅಭಿನಯ

ಕನ್ನಡ

ಪ್ರತಿ ದಿನ 3 ಪ್ರದರ್ಶನಗಳು

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣ ಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಸ್ತುತ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

ಗೋರಕ್ಷಣ'ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ" ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ

Edited Printed and Published by Dharmapracharaniratha M S. Krishna Rao (Proprietor) at the Satyavadi Press Chamarajapuram Mysore 4